ಉ. ಉಳಿದ ಹರಾಜು ಮೊಬಲಗನ್ನು ಅಂದರೆ 1,500 ರೂಪಾಯಿಗಳನ್ನು ಖಜಾನೆಗೆ ಜಮಾ ಮಾಡುವಂತೆ ಸಂಬಂಧಿಸಿದ ರಾಜಸ್ವ ನಿರೀಕ್ಷಕರಿಗೆ ಸೂಚಿಸಲಾಗಿದೆ. ಆದುದರಿಂದ, ಯಾರ ಮೇಲೂ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಊ. ಪ್ರಶ್ನೆ 'ಉ' ಗೆ ಕೊಟ್ಟಿರುವ ಉತ್ತರ ಈ ಪ್ರಶ್ನೆಗೂ ಅನ್ವಯಿಸುತ್ತದೆ.

ಹಾಸನ ವಿಧಾನ ಸಭಾಕ್ಷೇತ್ರಕ್ಕೆ ಕಿರು ನೀರು ಸರಬರಾಜು ಯೋಜನೆಗಳ ಬಗ್ಗೆ.

1085 (578): ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ):–

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನ ವಿಧಾನಸಭಾ ಕ್ಷೇತ್ರದ ಕಟ್ಟಾಯ, ಕಸಬ ಮತ್ತು ಶಾಂತಿ ಗ್ರಾಮದ ಹೋಬಳಿಗಳ ಯಾವ ಯಾವ ಊರುಗಳಿಗೆ ಕಿರುನೀರು ಸರಬರಾಜು ಯೋಜನೆಗಳು ಮಂಜೂರಾಗಿವೆ ? (ಮಂಜೂರಾದ ತಾರೀಖುಗಳನ್ನು ತಿಳಿಸುವುದು);

ಆ. ಈ ರೀತಿ ಮಂಜೂರಾದ ಎಷ್ಟು ಕಿರುನೀರು ಸರಬರಾಜು ಯೋಜನೆಗಳ ಕೆಲಸಗಳು ಪೂರ್ಣಗೊಂಡಿವೆ ? (ವಿವರ ನೀಡುವುದು) ?

ಇ. ಈ ರೀತಿ ಪೂರ್ಣಗೊಂಡ •ಕಿರುನೀರು ಸರಬರಾಜು ಯೋಜನೆಗಳು ಯಾವ ಯಾವ ತಾರೀಖಿನಿಂದ ಕೆಟ್ಟು ನಿಂತು ಹೋಗಿವೆ ? (ವಿವರ ನೀಡುವುದು);

ಈ. ಅದಕ್ಕೆ ಕಾರಣಗಳೇನು ?

ಉ. ಮಂಜೂರಾಗಿರುವ ಕಿರುನೀರು ಸರಬರಾಜು ಯೋಜನೆಗಳಲ್ಲಿ ಎಷ್ಟು ಯೋಜನೆಗಳ ಕೆಲಸ ಪೂರ್ಣವಾಗಿಲ್ಲ ? (ವಿವರ ನೀಡುವುದು);

ಊ. ಈ ರೀತಿ ಯೋಜನೆಗಳು ಸಕಾಲದಲ್ಲಿ ಪೂರ್ಣವಾಗದಿರಲು ಕಾರಣಗಳೇನು ? (ವಿವರ ನೀಡುವುದು) ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ. 58 ಕಿರು ನೀರು ಸರಬರಾಜು ಯೋಜನೆಗಳು ಮಂಜೂರು ಆಗಿರುತ್ತದೆ.

(ಮಂಜೂರಾದ ವರ್ಷವನ್ನು ಅನುಬಂಧದಲ್ಲಿ ತೋರಿಸಲಾಗಿದೆ.)

ಆ. 42 ಕಿರು ನೀರು ಸರಬರಾಜು ಯೋಜನೆಗಳು ಪೂರ್ಣಗೊಂಡಿವೆ. (ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ)

ಇ. ಪೂರ್ಣಗೊಂಡ ಯೋಜನೆಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆ.

ಈ. ಉದ್ಭವಿಸುವುದಿಲ್ಲ.

ಉ. 16 ಕಿರು ನೀರು ಸರಬರಾಜು ಯೋಜನೆಗಳ ಕೆಲಸಗಳು ಪೂರ್ಣಗೊಂಡಿಲ್ಲ. ಅವುಗಳು ಪ್ರಗತಿಯಲ್ಲಿವೆ. (ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ).

ಊ. ವಿಳಂಬಕ್ಕೆ ಕಾರಣಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ಅನುಬಂಧ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 578

ಕಟ್ಟಾಯ, ಕಸಬಾ ಮತ್ತು ಶಾಂತಿ ಗ್ರಾಮ ಹೋಬಳಿಗಳಲ್ಲಿ (ಅ) ಮೊದಲಿನಿಂದ ಇದುವರೆವಿಗೂ ಮಂಜೂರಾಗಿರುವ ಮತ್ತು ಪೂರ್ಣಗೊಂಡಿರುವ ಕಿರುನೀರು ಸರಬರಾಜು ಯೋಜನೆಗಳ ಗ್ರಾಮಗಳು ಮತ್ತು (ಆ) ಮಂಜೂರಾದ ಮತ್ತು ಪೂರ್ಣವಾಗದೇ ಇರುವ ಯೋಜನೆಗಳು ಮತ್ತು ಅದಕ್ಕೆ ಕಾರಣದ ವಿವರಗಳು (ಇ) ಮಂಜೂರಾಗಿರುವ ಮತ್ತು ಪೂರ್ಣಗೊಂಡಿರುವ ಕಿರು ನೀರು ಸರಬರಾಜು ಯೋಜನೆಗಳ ಗ್ರಾಮಗಳು

ಅ. ಮಂಜೂರಾದ ವರ್ಷ 1985-86: 1. ಬೊಮ್ಮನಾಯಕನಹಳ್ಳಿ, 2. ಸತ್ಯಮಂಗಲ, 3. ಅಗಲಹಳ್ಳಿ, 4. ತಮ್ಲಾಪುರ ಜಾಜಾಪುರದ ಕೊಪ್ಪಲು, 5. ಕಿಂಚಿಮಾರನಹಳ್ಳಿ ತವರೆದೇವರ ಕೊಪ್ಪಲು, 6. ಉಡುವಾರೆ.

ಆ. ಮಂಜೂರಾದ ವರ್ಷ 1986-87: 7. ಬಿ. ಕಾಟೀಹಳ್ಳಿ, 8. ಹೊಂಗೆರೆ, 9. ಕುಪ್ಪಳ್ಳಿ, 10. ದೇವಿಹಳ್ಳಿ, 11. ದೊಡ್ಡಕೊಂಡೆ ಗೋಳ, 12. ಗುಡ್ಡೇನಹಳ್ಳಿ, 13. ತಟ್ಟೇಕೆರೆ.

ಇ. ಮಂಜೂರಾದ ವರ್ಷ 1987-88: 14. ಸಾತೇನಹಳ್ಳಿ, 15. ಶೆಟ್ಟೀಹಳ್ಳಿ, 16. ದೊಡ್ಡಮಂಡಿಗನಹಳ್ಳಿ, 17. ಬನವಾಸೆ, 18. ಕಾರ್ಲೆ, 19. ಮುಂಡನಾಯಕನಹಳ್ಳಿ.

ಈ. ಮಂಜೂರಾದ ವರ್ಷ 1988-89: 20. ಚಿಕ್ಕಮಂಡಿಗನಹಳ್ಳಿ, 21. ಗುಡದತೆರಣ್ಯ, 22, ಬ್ಯಾಡರಹಳ್ಳಿ.

ಉ. ಮಂಜೂರಾದ ವರ್ಷ 1989-90: 23. ಹನುಮಂತಪುರ, 24. ಬಸ್ತಿಹಳ್ಳಿ, 25. ರಂಗನಾಥಪುರ 26. ಹಲಸಿನಹಳ್ಳಿ.

ಊ. ಮಂಜೂರಾದ ವರ್ಷ 1990-91: 27. ಸಿಂಗಪಟ್ಟಣ, 28. ಮಲ್ಲಿದೇವರಪುರ (ಎ.ಕೆ.ಸಿ), 29. ಶಂಕರನಹಳ್ಳಿ, 30. ಕೆ. ಅಲದಹಳ್ಳಿ, 31. ದೊಡ್ಡಬಸವನಹಳ್ಳಿ, 32. ಮುದ್ದೇನಹಳ್ಳಿ, 33. ಚಿಟ್ಟಗೋಡನಹಳ್ಳಿ, 34. ವಿದ್ಯಾನಗರ, 35. ನಾಗೇನಹಳ್ಳಿ, 36. ದೊಡ್ಡಹೊನ್ನೇನಹಳ್ಳಿ, 37. ದೊಡ್ಡ ಬಾಗನಹಳ್ಳಿ, 28. ಡೋರನಹಳ್ಳಿ, 39. ಸಾಕೇನಹಳ್ಳಿ, 40. ದೊಡ್ಡಗೇಣಗೆರೆ, 41. ನಿಡೂದಿ.

ಎ. ಮಂಜೂರಾದ ವರ್ಷ 1991-92: 42. ಕೆಂಚನಹಳ್ಳಿ.

ಏ. ಮಂಜೂರಾದ ಮತ್ತು ಪೂರ್ಣವಾಗದೆ ಇರುವ ಯೋಜನೆಗಳು ಮತ್ತು ಅದಕ್ಕೆ ಕಾರಣಗಳು.

ಕ್ರಮ ಸಂಖ್ಯೆ	ಗ್ರಾಮದ ಹೆಸರು	ಮಂಜೂರಾದ ವರ್ಷ	ಪೂರ್ಣವಾಗದೆ ಇರುವುದಕ್ಕೆ ಕಾರಣಗಳು
43.	1. ಜಾಗರವಳ್ಳಿ (ಎಕೆಸಿ)	1989-90	ಸಿವಿಲ್ ಕೆಲಸ ಪೂರ್ಣಗೊಂಡಿದ್ದು ವಿದ್ಯುತ್ ಸಂಪರ್ಕವನ್ನು ಒದಗಿಸುವ ಕೆಲಸ ಪ್ರಗತಿಯಲ್ಲಿದೆ.
44.	2. ಕೆ. ಹಿರೇಹಳ್ಳಿ	1990-91	-ಡಿಟ್ಟೋ-
45.	3. ಎ ಗುಡುಗನಹಳ್ಳಿ	1990-91	-ಡಿಟ್ಟೋ-

46.	4. ಬಲ್ಲೇನಹಳ್ಳಿ	1990–91	ಸಿವಿಲ್ ಕೆಲಸ ಪೂರ್ಣಗೊಂಡಿದ್ದು ಕೊಳವೆ ಬಾವಿಯನ್ನು ಸ್ವಚ್ಛಗೊಳಿಸಿ ನಂತರ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುವುದು.
47.	5. ಕೆಂಚಟವಳ್ಳಿ ಮತ್ತು ಚಿಕ್ಕಗೇಣಿಗೆರೆ	1990–91	ಸಿವಿಲ್ ಕೆಲಸವು ಮುಗಿಯುವ ಹಂತದಲ್ಲಿದ್ದು ವಿದ್ಯುತ್ ಸಂಪರ್ಕವನ್ನು ಒದಗಿಸುವ ಕೆಲಸ ಪ್ರಗತಿಯಲ್ಲಿರುತ್ತದೆ.
48.	6. ಚಿಗಳ್ಳಿ	1990–91	ಸಿವಿಲ್ ಕೆಲಸ ಮತ್ತು ವಿದ್ಯುತ್ ಸಂಪರ್ಕ ಒದಗಿಸುವ ಕೆಲಸ ಪ್ರಗತಿಯಲ್ಲಿದೆ.
49.	7. ಪದುಮನಹಳ್ಳಿ	1989–90	–ಡಿಟ್ಟೋ–
50.	8. ಸಾವಂತನಹಳ್ಳಿ	1989–90	–ಡಿಟ್ಟೋ–
51.	9. ಸತ್ತಿಗರಹಳ್ಳಿ ಕೊಪ್ಪಲು	1990–91	–ಡಿಟ್ಟೋ–
52.	10. ಬನವಾಸೆ	1990–91	–ಡಿಟ್ಟೋ–
53.	11. ಯಡಿಯೂರು	1992–93	–ಡಿಟ್ಟೋ–
54.	12. ದೊಡ್ಡಪುರ	1992–93	–ಡಿಟ್ಟೋ–
55.	13. ತಮ್ಮಾಪುರ	1992–93	–ಡಿಟ್ಟೋ–
56.	14. ಗೊಳೀನಹಳ್ಳಿ	1992–93	–ಡಿಟ್ಟೋ–
57.	15. ಕೊಕ್ಕೇನಘಟ್ಟ	1992–93	–ಡಿಟ್ಟೋ–
58.	16. ಕಲ್ಲಹಳ್ಳಿ	1991–92	ಸಿವಿಲ್ ಕೆಲಸ ಮತ್ತು ವಿದ್ಯುತ್ ಸಂಪರ್ಕ ಒದಗಿಸುವ ಕೆಲಸ ಪ್ರಗತಿಯಲ್ಲಿದೆ.

ರಾಜ್ಯದಲ್ಲಿ ನಾಡ ಕಛೇರಿಗಳು ಕಾರ್ಯ ನಿರ್ವಹಿಸಲು ಖರ್ಚಾಗುತ್ತಿರುವ ಹಣ

1086 (870): ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ):–

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಾಡ ಕಛೇರಿಗಳೆಷ್ಟು; ಈ ನಾಡ ಕಚೇರಿಗಳನ್ನು ನಡೆಸಲು ಖರ್ಚಾಗುತ್ತಿರುವ ಹಣವೆಷ್ಟು ? (ವಿವರ ಕೊಡಿ),